ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ – ೩**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತ ನಾಲ್ಕನೇ ಅಧಿವೇಶನ**

**ಗುರುವಾರ, ದಿನಾಂಕ: ೦೮ನೇ ಫೆಬ್ರವರಿ, ೨೦೧೮**

---

**ಸಮೂಹ – IV**

೧. ಮುಖ್ಯಮಂತ್ರಿಗಳು

೨. ಗೃಹ ಸಚಿವರು

೩. ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು

೪. ನಗರಾಭಿವೃದ್ಧಿ ಹಾಗೂ ಹಜ್ ಸಚಿವರು

೫. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು

೬. ಅಬಕಾರಿ ಸಚಿವರು

---

## ಕೇಂದ್ರ ಸರ್ಕಾರದಿಂದ ಯೋಜನೆ ಹಾಗೂ ಯೋಜನೇತರ ಯೋಜನೆಗಳ ಅನುದಾನದ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೩೦ (೨೯೩) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರದ ವಿವಿಧ ಯೋಜನೆಗಳಿಗೆ ಹಾಗೂ ಯೋಜನೇತರ ಯೋಜನೆಗಳಿಗೆ ಅನುದಾನ ಬರುತ್ತಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ಅಂತಹ ಯೋಜನೆಗಳು ಹಾಗೂ ಯೋಜನೇತರ ಯೋಜನೆಗಳು ಯಾವುವು ; ಪ್ರತಿ ಯೋಜನೆಗಳಿಗೆ ೨೦೦೮–೦೯ ರಿಂದ ೨೦೧೭–೧೮ ರವರೆಗೆ ನಿಗಧಿಪಡಿಸಿರುವ ಅನುದಾನದ ಮೊತ್ತ ಎಷ್ಟು ; ಖರ್ಚು ಮಾಡಿರುವ ಹಣದ ಮೊತ್ತ ಮತ್ತು ಬಾಕಿ ಹಣದ ಮೊತ್ತ ಎಷ್ಟು ; ಸಂಪೂರ್ಣ ವಿವರವನ್ನು ಯೋಜನೆವಾರು, ವರ್ಷಾವಾರು ನೀಡುವುದು ?

**ಗುತ್ತಿಗೆ/ನಿಯೋಜನೆ ಆಧಾರದ ಮೇಲೆ**
**ನೇಮಕಾತಿ ಮಾಡಿಕೊಳ್ಳುವ ಕುರಿತು**

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ ) –**

೩೨ (೨೮೪) ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ಮೆಟ್ರೋ ರೈಲು ನಿಗಮದ ಕಾರ್ಯಾಚರಣೆ, ನಿರ್ವಹಣೆ ಮತ್ತು ಮಾನವ ಸಂಪನ್ಮೂಲ ವಿಭಾಗದಲ್ಲಿ ಗುತ್ತಿಗೆ / ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು ; (ಹೆಸರು, ಹುದ್ದೆಯ ಪದನಾಮ, ನಿಗಮಕ್ಕೆ ಸೇರಿದ ದಿನಾಂಕ, ಪಡೆಯುತ್ತಿರುವ ವೇತನ, ಮಾತೃ ಇಲಾಖೆ ಇತ್ಯಾದಿಗಳೊಂದಿಗೆ ವಿವರವಾದ ಮಾಹಿತಿ ನೀಡುವುದು)

(ಆ) ದಿನಾಂಕ: ೦೧.೧೨.೨೦೧೭ ರಿಂದ ಇಲ್ಲಿಯವರೆಗೆ ಎಷ್ಟು ಜನರನ್ನು ಯಾವ ಹುದ್ದೆಗಳಿಗೆ ಗುತ್ತಿಗೆಯಡಿಯಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿದೆ ; (ವಿವರವಾದ ಮಾಹಿತಿ ನೀಡುವುದು)

(ಇ) ದಿನಾಂಕ: ೦೧.೧೨.೨೦೧೭ ರಿಂದ ಇಲ್ಲಿಯವರೆಗೆ ಪದೋನ್ನತಿ ನೀಡಲಾಗಿರುವ ನೌಕರರ ಸಂಖ್ಯೆ ಎಷ್ಟು ; (ವಿವರವಾದ ಮಾಹಿತಿ ನೀಡುವುದು)

(ಈ) ಗುತ್ತಿಗೆಯಡಿಯಲ್ಲಿ ನೇಮಕಾತಿ ಮಾಡಿಕೊಳ್ಳಲು ಇರುವ ಮಾನದಂಡಗಳೇನು ? (ವಿವರವಾದ ಮಾಹಿತಿ ನೀಡುವುದು)

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿಸಿರುವ ಬಡಾವಣೆಯ ಅಧಿಸೂಚನೆಯ ಬಗ್ಗೆ

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು)** –

೩೩ (೨೫೧) ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬೆಂಗಳೂರು ಸುತ್ತ ಬಡಾವಣೆಗಳನ್ನು ನಿರ್ಮಿಸಲು ೦೧.೦೧.೧೯೭೬ ರಿಂದ ೩೧.೧೨.೨೦೦೫ರ ವರೆವಿಗೂ ಬಿ.ಡಿ.ಎ. ಕಾಯ್ದೆ ೧೯೭೬ ಕಲಂ ೧೯ರ ಅಂತಿಮ ಅಧಿಸೂಚನೆ ಹೊರಡಿಸಿರುವ ಸಂಖ್ಯೆ ಎಷ್ಟು ; ಅದರ ಅನುಗುಣವಾಗಿ ಒಟ್ಟು ಎಷ್ಟು ಎಕರೆ ಹಾಗೂ ಊರುಗಳನ್ನು ಅಧಿಸೂಚನೆಯ ಪ್ರಕಾರ ಸ್ವಾಧೀನಕ್ಕೆ ಒಳಪಡಿಸಲಾಗಿರುತ್ತದೆ ; (ಎಕರೆವಾರು ಪ್ರದೇಶ, ಊರುಗಳು ಸೇರಿದಂತೆ ಸಂಪೂರ್ಣ ಮಾಹಿತಿಗಳನ್ನು ದಾಖಲೆಗಳೊಂದಿಗೆ ನೀಡುವುದು)

(ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಭೂಸ್ವಾಧೀನ ಅಂತಿಮ ಅಧಿಸೂಚನೆಗೆ ಒಳಪಟ್ಟ ಜಮೀನುಗಳ ಪೈಕಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಭೌತಿಕವಾಗಿ (Symbolic position ಹೊರತುಪಡಿಸಿ) ಸ್ವಾಧೀನಪಡಿಸಿಕೊಂಡು, ಉದ್ದೇಶಿತ ಯೋಜನೆಯಂತೆ, ಬಡಾವಣೆ ರಚಿಸಿರುವ, ಪ್ರಕರಣ/ಜಮೀನುಗಳ ಒಟ್ಟು ಎಕರೆವಾರು ಪ್ರದೇಶ, ಊರುಗಳು ಸೇರಿದಂತೆ ಪ್ರತ್ಯೇಕವಾಗಿ ಪ್ರತಿ ಅಧಿಸೂಚನೆಗೆ ಅನುಗುಣವಾಗಿ ಸಂಪೂರ್ಣ ಮಾಹಿತಿಗಳನ್ನು ದಾಖಲೆಗಳೊಂದಿಗೆ ನೀಡುವುದು ;

(ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಂತಿಮ ಅಧಿಸೂಚನೆಗೆ ಒಳಪಟ್ಟ ಜಮೀನುಗಳಲ್ಲಿ ಬಡಾವಣೆ ನಿರ್ಮಿಸದೆ ಇರುವ ಎಷ್ಟು ಜಮೀನುಗಳು/ ಪ್ರಕರಣಗಳಲ್ಲಿ ಅನಧಿಕೃತ ಬಡಾವಣೆಗಳಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಭಿವೃದ್ಧಿ ಹೊಂದಿರುವ ಪ್ರದೇಶಗಳ

ಸಂಖ್ಯೆ ಎಷ್ಟು ; ಒಟ್ಟು ಎಕರೆವಾರು ಪ್ರದೇಶ, ಊರುಗಳು ಸೇರಿದಂತೆ ಪ್ರತ್ಯೇಕವಾಗಿ ಪ್ರತಿ ಅಧಿಸೂಚನೆಗೆ ಅನುಗುಣವಾಗಿ ಸಂಪೂರ್ಣ ಮಾಹಿತಿಗಳನ್ನು ದಾಖಲೆಗಳೊಂದಿಗೆ ನೀಡುವುದು ;

(ಈ) ಅಂತಿಮ ಅಧಿಸೂಚನೆಗೆ ಒಳಪಡುವ ಜಮೀನುಗಳ ಮೇಲೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಆಡಳಿತಾತ್ಮಕವಾಗಿ ತೆಗೆದುಕೊಂಡ ಕ್ರಮಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ದಾಖಲಾತಿಗಳೊಂದಿಗೆ ನೀಡುವುದು ;

ಉ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹೊರಡಿಸಿರುವ ಅಂತಿಮ ಅಧಿಸೂಚನೆಗೆ ಒಳಪಡುವ ಜಮೀನುಗಳಲ್ಲಿ ಅನಧಿಕೃತ ಬಡಾವಣೆಗಳನ್ನು ನಿರ್ಮಿಸಿರುವ ಜಮೀನುಗಳನ್ನು ಭೂಸ್ವಾಧೀನದಿಂದ ಕೈಬಿಡಲಾಗಿದೆಯೇ; ಬಿಟ್ಟಿದ್ದಲ್ಲಿ ಸಂಪೂರ್ಣ ಮಾಹಿತಿಗಳನ್ನು ದಾಖಲೆಗಳೊಂದಿಗೆ ನೀಡುವುದು ?

## ಕೆಂಪೇಗೌಡ ಬಡಾವಣೆಯಲ್ಲಿನ ನಿವೇಶನ ಹಂಚಿಕೆ ಮತ್ತು ಹಣ ಸಂಗ್ರಹ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು ) –**

೩೪ (೨೫೪) ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೆಂಪೇಗೌಡ ಬಡಾವಣೆಯಲ್ಲಿ ಒಟ್ಟು ಎಷ್ಟು ನಿವೇಶನಗಳನ್ನು ಸಾರ್ವಜನಿಕರಿಗೆ ವಿತರಿಸಲಾಗುವುದು ; ಇಲ್ಲಿಯವರೆಗೆ ಹಂಚಿಕೆ ಮಾಡಲಾಗಿರುವ ನಿವೇಶನಗಳೆಷ್ಟು ; (ವಿವರ ನೀಡುವುದು)

(ಆ) ಕೆಂಪೇಗೌಡ ಬಡಾವಣೆಯಲ್ಲಿ ನಿರ್ಮಿಸಲಾಗಿರುವ ಒಟ್ಟು ನಿವೇಶನಗಳ ಸಂಖ್ಯೆ ಎಷ್ಟು ; ಹಾಗೂ ಯಾವ್ಯಾವ ಅಳತೆಯ ನಿವೇಶನಗಳನ್ನು ನಿರ್ಮಿಸಲಾಗಿದೆ ; ಸದರಿ ನಿವೇಶನಗಳಿಗೆ ನಿಗದಿಪಡಿಸಲಾಗಿರುವ ದರವೆಷ್ಟು ;

(ಇ) ಸದರಿ ಬಡಾವಣೆಯ ನಿವೇಶನ ಹಂಚಿಕೆಗಾಗಿ ಸಂಗ್ರಹಿಸಲಾಗಿರುವ ಹಣವೆಷ್ಟು ; ಈ ಬಡಾವಣೆಯಲ್ಲಿ ಇನ್ನೂ ಹಂಚಿಕೆಯಾಗದೆ ಎಷ್ಟು ನಿವೇಶನಗಳು ಬಾಕಿ ಉಳಿದಿವೆ ; ಬಾಕಿ ಇದ್ದಲ್ಲಿ, ಮಾಹಿತಿ ನೀಡುವುದು ;

(ಈ) ಸಾರ್ವಜನಿಕರಿಗೆ ವಿತರಿಸಿದ, ಬಾಕಿಯಿರುವ, ನಿಗಧಿಪಡಿಸಿರುವ ದರ ಹಾಗೂ ಸಂಗ್ರಹಿಸಿದ ಹಣದ ಸಂಪೂರ್ಣ ಮಾಹಿತಿ ನೀಡುವುದು ?

## ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ / ಅರೆ ಸರ್ಕಾರಿ ಕಾರ್ಯಾಲಯಗಳ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೩೫ (೨೧೫) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹೈದ್ರಾಬಾದ್ ಕರ್ನಾಟಕ ಭಾಗದ ೬ ಜಿಲ್ಲೆಗಳು ಹಾಗೂ ಹರಪನಹಳ್ಳಿ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ/ಅರೆ ಸರ್ಕಾರಿ ಇಲಾಖೆಗಳು ಎಷ್ಟು; ಸದರಿ ಇಲಾಖೆಗಳಲ್ಲಿ ಮಂಜೂರಾದ, ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳು ಎಷ್ಟು ಮತ್ತು ಯಾವ ವರ್ಷದಿಂದ ಖಾಲಿ ಇವೆ ; (ಹುದ್ದೆವಾರು, ಜಿಲ್ಲಾವಾರು, ಇಲಾಖಾವಾರು, ವರ್ಷಾವಾರು ಮಾಹಿತಿ ನೀಡುವುದು)

(ಆ) ಮೇಲ್ಕಂಡ ಸರ್ಕಾರಿ / ಅರೆ ಸರ್ಕಾರಿ ಇಲಾಖೆಗಳಲ್ಲಿನ ಹುದ್ದೆಗಳಿಗೆ ಸಂವಿಧಾನದ ಕಲಂ ೩೭೧(ಜೆ) ಅನುಸಾರವಾಗಿ ಮೀಸಲಾತಿ ಕಲ್ಪಿಸಲಾಗಿದೆಯೇ ; (ಹುದ್ದೆವಾರು ಮಾಹಿತಿ ನೀಡುವುದು)

(ಇ) ಹೈದ್ರಾಬಾದ್–ಕರ್ನಾಟಕ ಭಾಗದ ೬ ಜಿಲ್ಲೆಗಳು ಹಾಗೂ ಹರಪನಹಳ್ಳಿ ತಾಲ್ಲೂಕಿನಲ್ಲಿ ಖಾಲಿ ಇರುವ ಹುದ್ದೆಗಳಿಗೆ ಸಂವಿಧಾನದ ಕಲಂ ೩೭೧ (ಜೆ) ಅನುಸಾರವಾಗಿ ನೇಮಕಾತಿ ಮಾಡಲಾಗಿದೆಯೇ? (ನೇಮಕಾತಿಯಾದವರ ಜಿಲ್ಲಾವಾರು, ಇಲಾಖಾವಾರು, ಹುದ್ದೆವಾರು ಮಾಹಿತಿ ನೀಡುವುದು)

## ಸೂಲಿಕೆರೆ ಗ್ರಾಮದ ಸರ್ವೆ ನಂ. ೬೯ರ ಭೂಸ್ವಾಧೀನದ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೬ (೨೪೩) ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೆಂಗೇರಿ ಹೋಬಳಿಯ ಸೂಲಿಕೆರೆ ಗ್ರಾಮದ ಸರ್ವೆ ನಂ. ೬೯ರಲ್ಲಿ ಕೆಂಪೇಗೌಡ ಬಡಾವಣೆಗೆ ಭೂ ಸ್ವಾಧೀನ ಮಾಡಿಕೊಂಡಿರುವ ಜಮೀನಿನ ವಿಸ್ತೀರ್ಣವೆಷ್ಟು ;

(ಆ) ಭೂಸ್ವಾಧೀನ ಮಾಡಿಕೊಂಡಿರುವ ಭೂ ಮಾಲೀಕರಿಗೆ ಪರಿಹಾರಧನ ನೀಡಲಾಗಿದೆಯೇ ; ನೀಡಿದ್ದಲ್ಲಿ, ಚೆಕ್ ಅಥವಾ ನಗದು ರೂಪದಲ್ಲಿ ನೀಡಲಾಗಿದೆಯೇ ; (ವಿವರ ನೀಡುವುದು)

(ಇ) ಭೂಸ್ವಾಧೀನ ಮಾಡಿಕೊಂಡಿರುವ ಜಮೀನನ್ನು ಇಂಜಿನಿಯರ್ ವಿಭಾಗಕ್ಕೆ ಹಸ್ತಾಂತರ ಮಾಡಲಾಗಿದೆಯೇ ; ಹಾಗಿದ್ದಲ್ಲಿ, ಯಾವ ವರ್ಷ ಹಸ್ತಾಂತರ ಮಾಡಲಾಗಿದೆ ; (ವಿವರ ನೀಡುವುದು)

(ಈ) ಸೂಲಿಕೆರೆ ಗ್ರಾಮದ ಸರ್ವೆ ನಂ. ೬೯ರಲ್ಲಿ ಕೆಂಪೇಗೌಡ ಬಡಾವಣೆಗೆ ಭೂ ಸ್ವಾಧೀನ ಮಾಡಿಕೊಂಡಿರುವ ಜಮೀನಿನಲ್ಲಿ ಸಾರ್ವಜನಿಕರಿಗೆ ನಿವೇಶನ ಹಂಚಿಕೆ ಮಾಡುವ ಸಲುವಾಗಿ ನಿವೇಶನ ವಿಂಗಡಣೆ ಮಾಡಲಾಗಿದೆಯೇ ; ಮಾಡಿದ್ದಲ್ಲಿ, ಮಾಹಿತಿ ನೀಡುವುದು ;

ಉ) ಸರ್ವೆ ನಂ. ೬೯ಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಯಾವುದಾದರೂ ಪ್ರಕರಣ ಬಾಕಿ ಇದೆಯೇ ; ಹಾಗಿದ್ದಲ್ಲಿ, ಪ್ರಕರಣವನ್ನು ತೆರವುಗೊಳಿಸಲು ಪ್ರಾಧಿಕಾರ ಕೈಗೊಂಡ ಕ್ರಮವೇನು? (ಮಾಹಿತಿ ನೀಡುವುದು)

## ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ, ದೌರ್ಜನ್ಯ ಪ್ರಕರಣ ಮತ್ತು ಕೋಮು ಗಲಭೆ ಹೆಚ್ಚುತ್ತಿರುವ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೩೭ (೨೬೧) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಇತ್ತೀಚಿನ ದಿನಗಳಲ್ಲಿ ಕಾನೂನು ಸುವ್ಯವಸ್ಥೆ ಕುಸಿದು, ದೌರ್ಜನ್ಯ ಪ್ರಕರಣಗಳು ಮತ್ತು ಕೋಮು ಗಲಭೆ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಳೆದ ೪ ವರ್ಷಗಳಲ್ಲಿ ನಡೆದ ಕೊಲೆ, ಅತ್ಯಾಚಾರ, ಮಹಿಳಾ ದೌರ್ಜನ್ಯ ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳ ಸಂಖ್ಯೆ ಎಷ್ಟು ;

(ಇ) ಕಳೆದ ೪ ವರ್ಷಗಲ್ಲಿ ನಡೆದ ಭಯೋತ್ಪಾದನೆ, ಕೋಮು ಗಲಭೆ ಮತ್ತು ಗಲಭೆ ಪ್ರಕರಣಗಳ ಸಂಖ್ಯೆ ಎಷ್ಟು ; (ವರ್ಷವಾರು ವಿವರ ನೀಡುವುದು)

(ಈ) ಕಳೆದ ೪ ವರ್ಷಗಳಲ್ಲಿ ಬಿಜೆಪಿ ಮತ್ತು ಹಿಂದೂ ಸಂಘ ಪರಿವಾರದ ಕಾರ್ಯಕರ್ತರ ಮೇಲೆ ನಡೆದ ಹಲ್ಲೆ ಮತ್ತು ಹತ್ಯೆ ಪ್ರಕರಣಗಳೆಷ್ಟು ; (ಸಂಪೂರ್ಣ ವಿವರ ನೀಡುವುದು)

ಉ) ರಾಜ್ಯದಲ್ಲಿ ಬಿಜೆಪಿ ಕಾರ್ಯಕರ್ತರು ಹಾಗೂ ಹಿಂದೂ ಸಂಘ ಪರಿವಾರ ಕಾರ್ಯಕರ್ತರ ಮೇಲೆ ಪದೇ ಪದೇ ಹಲ್ಲೆ ಮತ್ತು ಹತ್ಯೆಯಾಗುತ್ತಿರುವುದನ್ನು ನಿಯಂತ್ರಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

**ಬೆಂಗಳೂರಿನ ಕಲಾಸಿಪಾಳ್ಯದ**
**"ಕೈಲಾಶ್ ಬಾರ್ ಅಂಡ್ ರೆಸ್ಟೋರೆಂಟ್"ನಲ್ಲಿ ಸಂಭವಿಸಿದ**
**ಬೆಂಕಿ ಅವಘಡದ ಬಗ್ಗೆ**

**ಶ್ರೀ ಟಿ.ಎ. ಶರವಣ (ವಿಧಾನ ಸಭೆಯಿಂದ ಚುನಾಯಿತರಾದವರು) –**

೩೮ (೨೪೭) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಇತ್ತೀಚಿಗೆ ಬೆಂಗಳೂರಿನ ಕಲಾಸಿಪಾಳ್ಯದ ಕೈಲಾಶ್ ಬಾರ್ ಅಂಡ್ ರೆಸ್ಟೋರಂಟ್‌ನಲ್ಲಿ ಆದ ಬೆಂಕಿ ಅವಘಡಕ್ಕೆ ಕಾರಣಗಳೇನು ;

(ಆ) ಈ ಬೆಂಕಿ ಅವಘಡದಲ್ಲಿ ಮೃತಪಟ್ಟವರ ಸಂಖ್ಯೆ ಎಷ್ಟು ; ಗಾಯಗೊಂಡವರ ಸಂಖ್ಯೆ ಎಷ್ಟು ; ಇವರುಗಳಿಗೆ ನೀಡಿರುವ ಪರಿಹಾರದ ಹಣ ಎಷ್ಟು ; (ವಿವರವಾದ ಮಾಹಿತಿ ನೀಡುವುದು)

(ಇ) ಬಾರ್‌ನಲ್ಲಿ ಕಳ್ಳ ವ್ಯಾಪಾರ ನಡೆಸುತ್ತಿರುವುದು ವರದಿಯಾಗಿದ್ದರೂ ಕ್ರಮಕೈಗೊಳ್ಳಲು ಇಲಾಖಾ ಅಧಿಕಾರಿಗಳು ವಿಫಲರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಕಳ್ಳ ವ್ಯಾಪಾರ ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

**ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸದ್ಯ ನಿವೃತ್ತಿ, ನಿಧನ, ರಾಜೀನಾಮೆಯಿಂದ ತೆರವಾದ ಹುದ್ದೆಗಳ ಕುರಿತು**

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ ) –**

೩೯ (೨೬೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರದ ಇಲಾಖೆಗಳಲ್ಲಿ ಸದ್ಯ ವಿವಿಧ ಕೇಡರ್‌ಗಳಲ್ಲಿ ನಿವೃತ್ತಿ, ನಿಧನ ಹಾಗೂ ರಾಜೀನಾಮೆಯಿಂದ ತೆರವಾಗಿರುವ ಹುದ್ದೆಗಳು ಎಷ್ಟು : (ಇಲಾಖಾವಾರು ಕೇಡರ್‌ವಾರು ಪಟ್ಟಿ ನೀಡುವುದು)

(ಆ) ಈ ಎಲ್ಲಾ ಇಲಾಖೆಗಳಲ್ಲಿ ಸದ್ಯ ನೇಮಕಾತಿ ಮಾಡಿಕೊಳ್ಳಲಾಗುತ್ತಿರುವ ಹುದ್ದೆಗಳೆಷ್ಟು ಇಲಾಖಾವಾರು ಕೇಡರ್‌ವಾರು ಹುದ್ದೆಗಳ ನೇಮಕಾತಿಗಳ ಬಗ್ಗೆ ವಿವರಣೆ ನೀಡುವುದು ;

(ಇ) ಸದ್ಯ ನೇಮಕಾತಿ ಮಾಡಿಕೊಳ್ಳುತ್ತಿರುವ ಹುದ್ದೆಗಳಲ್ಲಿ ಕೆ.ಪಿ.ಎಸ್.ಸಿ. ಹಾಗೂ ಇಲಾಖೆ ಮೂಲಕ ಆಗುತ್ತಿರುವ ಹುದ್ದೆಗಳ ಕುರಿತು ವಿವರವಾದ ಮಾಹಿತಿ ನೀಡುವುದು ?

**೨೦೧೩–೧೪ ರಿಂದ ೨೦೧೭–೧೮ ರವರೆಗೆ ಹಾವೇರಿ ಜಿಲ್ಲೆಗೆ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ಅನುದಾನದ ಬಗ್ಗೆ**

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦ (೨೦೮) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೩–೧೪ ರಿಂದ ೨೦೧೭–೧೮ ರವರೆಗೆ ಹಾವೇರಿ ಜಿಲ್ಲೆಗೆ ನಗರಸಭೆ, ಪುರಸಭೆ ಪಟ್ಟಣ ಪಂಚಾಯಿತಿಗಳಿಗೆ ಯಾವ ಯಾವ ಯೋಜನೆಯಡಿಯಲ್ಲಿ ಯಾವ ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಅನುದಾನ ಬಿಡುಗಡೆಯಾಗಿದೆ ;

ಇದರಲ್ಲಿ ಪೂರ್ಣಗೊಂಡ ಇನ್ನು ಚಾಲ್ತಿಯಲ್ಲಿರುವ ಹಾಗೂ ಬಾಕಿ ಇರುವ ಕಾಮಗಾರಿಗಳು ಎಷ್ಟು ; ಬಾಕಿ ಇರುವ ಅನುದಾನ ಎಷ್ಟು ; ಸದರಿ ಕಾಮಗಾರಿಗಳು ಬಾಕಿ ಇರಲು ಕಾರಣಗಳೇನು ;

(ಆ) ವರ್ಷವಾರು, ಯೋಜನಾವಾರು, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳವಾರು ವಿವರ ನೀಡುವುದು ; ಶಿಗ್ಗಾಂವ್ ಪುರಸಭೆ, ಸವಣೂರು ಪುರಸಭೆ, ಬಂಕಾಪುರ ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ಪ್ರತ್ಯೇಕ ವಿವರ ನೀಡುವುದು ?

## ಸರ್ಕಾರದ ಯೋಜನೆಗಳ ಪ್ರಚಾರ ನೆಪದಲ್ಲಿ ಸರ್ಕಾರ ದುಂದುವೆಚ್ಚ ಮಾಡುತ್ತಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೪೧ (೨೩೩) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರವ ವಿವಿಧ ಯೋಜನೆಗಳ ಪ್ರಚಾರ ಕುರಿತು ಸುದ್ದಿ ಮಾಧ್ಯಮಗಳಾದ ಎಲೆಕ್ಟ್ರಾನಿಕ್ ಮಾಧ್ಯಮ, ಪ್ರಿಂಟ್ ಮಾಧ್ಯಮ ಹಾಗೂ ವಿವಿಧ ಜಾಹೀರಾತುಗಳ ಮೂಲಕ ಪ್ರಚಾರ ಮಾಡುತ್ತಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ೨೦೧೬–೧೭ ಮತ್ತು ೨೦೧೭–೧೮ನೇ ಸಾಲಿನಲ್ಲಿ ಸದರಿ ವಿವಿಧ ಜಾಹೀರಾತುಗಳ ಮೂಲಕ ಯೋಜನೆಗಳ ಪ್ರಚಾರ ಮಾಡಲು ಸರ್ಕಾರ ಖರ್ಚು ಮಾಡಿರುವ ಹಣವೆಷ್ಟು ; (ಇಲಾಖಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ಸರ್ಕಾರದ ಕಾರ್ಯಕ್ರಮಗಳ ಪ್ರಚಾರಕ್ಕೆ ಮತ್ತು ಜಾಹೀರಾತುಗಳಿಗೆ ವೆಚ್ಚ ಮಾಡಲು ಇರುವ ಮಾನದಂಡಗಳು ಮತ್ತು ನಿಬಂಧನೆಗಳೇನು ; (ವಿವರ ನೀಡುವುದು)

(ಈ) ಸರ್ಕಾರದ ಕಾರ್ಯಕ್ರಮಗಳ ಪ್ರಚಾರಕ್ಕೆ ಮತ್ತು ಜಾಹೀರಾತುಗಳಿಗೆ ವೆಚ್ಚ ಮಾಡಲೆಂದೇ ೨೦೧೬-೧೭ ಮತ್ತು ೨೦೧೭-೧೮ನೇ ಸಾಲಿನಲ್ಲಿ ಎಷ್ಟೆಷ್ಟು ಅನುದಾನ ಕಾಯ್ದಿರಿಸಲಾಗಿತ್ತು ; ಇಲಾಖೆಗಳಲ್ಲಿ ಜಾಹೀರಾತುಗಳ ಮೂಲಕ ಪ್ರಚಾರಕ್ಕೆ ಖರ್ಚು ಮಾಡಲು ಮಿತಿ ಇದೆಯೇ ; ಇದ್ದಲ್ಲಿ, ಎಷ್ಟು ? (ಇಲಾಖಾವಾರು ಸಂಪೂರ್ಣ ಮಾಹಿತಿ ನೀಡುವುದು)

## ಇಂದಿರಾ ಕ್ಯಾಂಟೀನ್ ಸೇವೆಯನ್ನು ವಿಸ್ತರಿಸುವ ಬಗ್ಗೆ

**ಡಾ. ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) –**

೪೨ (೨೦೭) ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರಿನಲ್ಲಿ ಎಷ್ಟು ವಾರ್ಡ್‌ಗಳಲ್ಲಿ ಇಂದಿರಾ ಕ್ಯಾಂಟೀನ್ ಸ್ಥಾಪಿಸಲಾಗಿದೆ : ಈಗಾಗಲೇ ಎಷ್ಟು ಕ್ಯಾಂಟೀನ್‌ಗಳು ಕಾರ್ಯನಿರ್ವಹಿಸುತ್ತಿವೆ ; (ವಿವರಗಳನ್ನು ನೀಡುವುದು)

(ಆ) ಅತೀ ಜನನಿಬಿಡ ಪ್ರದೇಶಗಳಾದ ಬಸ್ ನಿಲ್ದಾಣ ಆಸ್ಪತ್ರೆಗಳ ಸಮೀಪ ರೈಲ್ವೆ ನಿಲ್ದಾಣ ಮಾರುಕಟ್ಟೆ, ಟ್ರಕ್ ಟರ್ಮಿನಲ್, ದೊಡ್ಡ ದೊಡ್ಡ ಸಮಾವೇಶ ನಡೆಯುವ ಜಾಗ ಚಳುವಳಿ ಧರಣಿ ನಡೆಯುವ ಸ್ಥಳಗಳ ಸಮೀಪ ಇಂದಿರಾ ಕ್ಯಾಂಟೀನ್ (ಸ್ಥಿರ ಅಥವಾ ಸಂಚಾರಿ) ಸ್ಥಾಪಿಸಿ ಜನ ಸಾಮಾನ್ಯರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ ; (ವಿವರಗಳನ್ನು ನೀಡುವುದು)

(ಇ) ಬೆಂಗಳೂರಿನಲ್ಲಿ ಸ್ಥಾಪಿಸಲಾದ ಇಂದಿರಾ ಕ್ಯಾಂಟೀನ್ ಯೋಜನೆಯನ್ನು ರಾಜ್ಯದ ಉಳಿದ ಭಾಗಗಳಲ್ಲಿ ವಿಸ್ತರಿಸಲು ಸರ್ಕಾರ ಚಿಂತಿಸಿದೆಯೇ ? (ವಿವರಗಳನ್ನು ನೀಡುವುದು)

## ನಗರೋತ್ಥಾನ ಯೋಜನೆಯಡಿಯ ಕಾಮಗಾರಿಗಳ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೪೩ (೨೭೬) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೀದರ್ ನಗರದಲ್ಲಿ ನಗರೋತ್ಥಾನ ಯೋಜನೆಯಡಿ ಹಂತ–೧, ೨, ೩ರಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ಹಾಲಿ ವಿವರ ನೀಡುವುದು ; (ವರ್ಷವಾರು, ಕಾಮಗಾರಿವಾರು ವಿವರ ನೀಡುವುದು)

(ಆ) ಬೀದರ್ ನಗರದಲ್ಲಿ ನಗರೋತ್ಥಾನ ಯೋಜನೆಯ ೨ನೇ ಹಂತದ ಕಾಮಗಾರಿ ಸರಿಯಾದ ಸಮಯಕ್ಕೆ ಮುಗಿದಿದೆಯೇ ; ಅಥವಾ ಇಲ್ಲವೇ ; ಇಲ್ಲದಿದ್ದಲ್ಲಿ, ಅಂತಹ ಗುತ್ತಿಗೆದಾರರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಇ) ನಗರೋತ್ಥಾನ ೩ರ ಕಾಮಗಾರಿ ಯೋಜನೆ ಆಗಿದೆಯೇ ; ಈ ಯೋಜನೆಯ ಕಾಮಗಾರಿಗಳು ಯಾವುವು ; ಪ್ರಸ್ತುತ ಈ ಕಾಮಗಾರಿಗಳು ಯಾವ ಹಂತದಲ್ಲಿದೆ ? (ಸ್ಪಷ್ಟ ಮಾಹಿತಿ ನೀಡುವುದು)

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರುವ ಕುರಿತು

**ಶ್ರೀ ರಾಮಚಂದ್ರ ಗೌಡ (ಪದವೀಧರರ ಕ್ಷೇತ್ರ) –**

೪೪ (೨೫೩) ಬಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮಂಜೂರಾಗಿರುವ ಒಟ್ಟು ಹುದ್ದೆಗಳ ಸಂಖ್ಯೆ ಎಷ್ಟು ;

(ಆ) ಇವುಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; (ವಿಭಾಗವಾರು ಸಂಕ್ಷಿಪ್ತ ವಿವರ ನೀಡುವುದು)

(ಇ) ಸಾಮಾನ್ಯ ಆಡಳಿತ, ಕಾಮಗಾರಿ, ಆರೋಗ್ಯ ಮತ್ತು ಶಿಕ್ಷಣ ವಿಭಾಗಗಳಲ್ಲಿ ಖಾಲಿ ಇರುವ ಹುದ್ದೆಗಳ ಶ್ರೇಣಿವಾರು ಸಂಕ್ಷಿಪ್ತ ವಿವರ ನೀಡುವುದು ;

(ಈ) ಹುದ್ದೆಗಳ ಪರಿಣಾಮ ಬೆಂಗಳೂರಿನ ಸ್ವಚ್ಛತೆ, ಜನರ ಆರೋಗ್ಯ, ಕಾಮಗಾರಿಗಳ ಅನುಷ್ಠಾನದಲ್ಲಿ ತೊಂದರೆ ಹಾಗೂ ಹಿನ್ನಡೆ ಕಾಣಿಸುತ್ತಿಲ್ಲವೆ : (ಸಂಕ್ಷಿಪ್ತ ವಿವರ ನೀಡುವುದು)

(ಉ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹುದ್ದೆಗಳು ಮಂಜೂರಾಗಿ ಎಷ್ಟು ವರ್ಷಗಳಾಗಿವೆ ?

## ರಾಜ್ಯ ಸರ್ಕಾರಿ ನೌಕರರಿಗೆ ೬ನೇ ವೇತನ ಆಯೋಗದ ವರದಿ ಜಾರಿ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ ) –**

೪೫ (೨೮೧) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳ ಪರಿಷ್ಕರಣೆಗಾಗಿ ೬ನೇ ವೇತನ ಆಯೋಗವನ್ನು ಯಾವಾಗ ರಚಿಸಲಾಯಿತು ; ಆಯೋಗಕ್ಕೆ ವರದಿ ನೀಡಲು ನಿಗದಿಪಡಿಸಿದ ಕಾಲಮಿತಿ ಎಷ್ಟು ; (ವಿವರ ನೀಡುವುದು)

(ಆ) ಸದರಿ ವೇತನ ಆಯೋಗವು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದೆಯೇ ;

(ಇ) ಇಲ್ಲವಾದಲ್ಲಿ, ಅವಧಿ ಮುಗಿದರೂ ವರದಿ ನೀಡದಿರಲು ಕಾರಣವೇನು ;

(ಈ) ವರದಿ ಸಲ್ಲಿಸಿದ್ದಲ್ಲಿ, ನೌಕರರಿಗೆ ಎಷ್ಟು ಪ್ರಮಾಣದ ವೇತನ ಮತ್ತು ಭತ್ಯೆಗಳ ಹೆಚ್ಚಳಕ್ಕೆ ಶಿಫಾರಸ್ಸು ಮಾಡಲಾಗಿದೆ ; (ವರದಿಯ ಪ್ರತಿ ನೀಡುವುದು)

(ಉ) ಈ ವರದಿಯನ್ನು ಯಾವಾಗ ಜಾರಿಗೆ ತರಲಾಗುವುದು ; ಮತ್ತು ಯಾವ ದಿನಾಂಕಕ್ಕೆ ಅನ್ವಯವಾಗುವಂತೆ ಜಾರಿಗೊಳಿಸಲಾಗುವುದು ? (ವಿವರ ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಪರಿಷತ್ತು.

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು – ಪ್ರತಿಗಳು–1500–ಪಿ2